**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಕಡೂರು**

**ಸಿಸಿ. ನಂ. 1359/2017**

ಫಿರ್ಯಾದಿ : ಕಡೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು :

2. ಅಫ್ಸರ್ ಬಿನ್ ರೆಹಮಾನ್ ದಾದ್,
ವಯಸ್ಸು ಸುಮಾರು 24 ವರ್ಷ,
ಚಿಕನ್ ಅಂಗಡಿಯಲ್ಲಿ ಕೆಲಸ,
ವಾಸಃ ನಾರಾಯಣಪ್ಪ ಮಟನ್ ಸ್ಟಾಲ್ ಪಕ್ಕ,
ಹುಣಸೆ ಮರದ ಕ್ರಾಸ್, ನೆಲಮಂಗಲ ಟೌನ್.

3. ಸಿಕಂದರ್ ಖುರೇಶಿ ಅಲಿಯಾಸ್ ಮಹಮ್ಮದ್ ಅಲಿ,
ಬಿನ್ ತಾಹ್ಯರ್ ಖುರೇಶಿ,
ವಯಸ್ಸು ಸುಮಾರು 20 ವರ್ಷ,
ಕರ್ನಾಟಕ ಮಟನ್ ಸ್ಟಾಲ್ ಅಂಗಡಿಯಲ್ಲಿ ಕೆಲಸ,
ವಾಸಃ ಮಧು ಮೆಡಿಕಲ್ ಹತ್ತಿರ, 2 ನೇ ಕ್ರಾಸ್,
ದರ್ಗಾ ಹತ್ತಿರ, ನೆಲಮಂಗಲ ಟೌನ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ದೋಷಾರೋಪಣೆ**

ಶ್ರೀ. ಹೆಚ್.ಪಿ ಮೋಹನ್‌ಕುಮಾರ್ ಬಿ.ಎಸ್ಸಿ, ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿಗಳಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ಮೊದಲನೇಯದಾಗಿ, ದಿನಾಂಕ 01.04.2017 ರಂದು ಸಂಜೆ ಸುಮಾರು 5.15 ಗಂಟೆ ಸಮಯದಲ್ಲಿ ಕಡೂರು ಪೋಲಿಸ್ ಠಾಣಾ ಸಿಂಗಂಧೂರು ಮೆಡಿಕಲ್ಸ್ ನಲ್ಲಿ ಚಾಸಾ.1 ಮತ್ತು ಚಾಸಾ.2 ರವರು ವ್ಯಾಪಾರ ಮಾಡುತ್ತಿರುವಾಗ 2 ಮತ್ತು 3 ನೇ ಆರೋಪಿತರಾದ ನೀವು 1 ನೇ ಆರೋಪಿತನೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಕೆಎ 01- ಎ.ಬಿ.1311 ನ ನೀಲಿ ಬಣ್ಣದ ಡಿಯೋ ಸ್ಕೂಟರ್ ನಲ್ಲಿ ಬಂದು 1 ನೇ ಆರೋಪಿಯು ಚಾಸಾ.1 ರವರಿಗೆ Nitrovate-10mg ಎಂಬ ಮಾತ್ರೆಯನ್ನು ಕೊಡಿ ಎಂದು ಕೇಳಿದ್ದು, ಆ ಮಾತ್ರೆಗಳು ಉದ್ದೀಪನ ಮಾತ್ರೆಗಳಾಗಿದ್ದು, ನಮ್ಮ ಅಂಗಡಿಯಲ್ಲಿ ಮಾರುವುದಿಲ್ಲ ಎಂದು ಹೇಳಿದ್ದಕ್ಕೆ 2 ಮತ್ತು 3 ನೇ ಆರೋಪಿತರಾದ ನೀವುಗಳು 1 ನೇ ಆರೋಪಿತನೊಂದಿಗೆ

ಸೇರಿಕೊಂಡು ಚಾಸಾ.1 ಮತ್ತು ಚಾಸಾ.2 ರವರಿಗೆ ಅವರ ಶಾಂತಿಭಂಗಕ್ಕೆ ಪ್ರೇರೇಪಣೆ ನೀಡುವ ರೀತಿಯಲ್ಲಿ ಮಾತ್ರೆ ಕೊಡದಿದ್ದರೆ ನಿಮ್ಮನ್ನು ಬಿಡುವುದಿಲ್ಲ ಹೊಡೆಯುತ್ತೇವೆ, ಬೋಳಿಮಕ್ಕಳ ಮಾತ್ರೆ ಕೊಡ್ರೊ ಎಂದು ಅವಾಚ್ಯವಾಗಿ ಬೈದು ನಿಂದಿಸಿರುವ ಕಾರಣ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 2 ಮತ್ತು 3 ನೇ ಆರೋಪಿತರಾದ ನೀವು 1 ನೇ ಆರೋಪಿತನೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಚಾಸಾ.1 ಮತ್ತು ಚಾಸಾ.2 ರವರೊಂದಿಗೆ ಜಗಳ ತೆಗೆದು, ಗಲಾಟೆ ಮಾಡಿ ಮಾತ್ರೆ ಕೊಡದಿದ್ದರೆ ನಿಮ್ಮನ್ನು ಬಿಡುವುದಿಲ್ಲ ಹೊಡೆಯುತ್ತೇವೆ, ಬೋಳಿಮಕ್ಕಳ ಮಾತ್ರೆ ಕೊಡ್ರೊ ಎಂದು ಅವಾಚ್ಯವಾಗಿ ಬೈದು ಪ್ರಾಣ ಬೆದರಿಕೆ ಹಾಕಿರುವ ಕಾರಣ ಕಾರಣ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 2 ಮತ್ತು 3 ನೇ ಆರೋಪಿತರಾದ ನೀವು 1 ನೇ ಆರೋಪಿತನೊಂದಿಗೆ ಸೇರಿಕೊಂಡು ಸಮಾನ ಉದ್ದೇಶದಿಂದ ಚಾಸಾ.1 ಮತ್ತು ಚಾಸಾ.2 ರವರೊಂದಿಗೆ ಜಗಳ ತೆಗೆದು, ಗಲಾಟೆ ಮಾಡಿ ನಿಮ್ಮ ಪೈಕಿ 3 ನೇ ಆರೋಪಿತರಾದ ನೀವು ಸ್ಕೂಟಿ ಬಳಿ ಹೋಗಿ ಸ್ಕೂಟಿಯನ್ನು ಸ್ಟಾರ್ಟ್ ಮಾಡಿ ನಿಲ್ಲಿಸಿಕೊಂಡಿದ್ದು, 1 ನೇ ಆರೋಪಿಯು ಸ್ಕೂಟಿಯಲ್ಲಿಟ್ಟುಕೊಂಡಿದ್ದ ಮಚ್ಚನ್ನು ತಂದಿದ್ದು, 2 ನೇ ಆರೋಪಿತರಾದ ನೀವು ಚಾಸಾ.2 ರವರನ್ನು ಹಿಡಿದು ಅಂಗಡಿಯಿಂದ ಎಳೆದುಕೊಂಡು ಬಂದಿದ್ದು, ಆಗ 1 ನೇ ಆರೋಪಿಯು ಮಚ್ಚನ್ನು ಬೀಸಿ ಚಾಸಾ.2 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಸ್ವ-ಇಚ್ಛಾ ಗಾಯವನ್ನುಂಟುಮಾಡಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ ನೀವುಗಳು ಮೇಲ್ಕಂಡ ದಂಡನೀಯ ಅಪರಾದಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ 07.01.2023.

**(ಹೆಚ್.ಪಿ ಮೋಹನ್‌ಕುಮಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
## ಕಡೂರು

## ಸಿಸಿ . ನಂ. 1359/2017

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 2 ನೇ ಆರೋಪಿಯ ಹೆಸರು | ಃ | ಅಫ್ಸರ್ |
| ತಂದೆಯ ಹೆಸರು | ಃ | ರೆಹಮಾನ್ ದಾದ್ |
| ವಯಸ್ಸು | ಃ | 24 ವರ್ಷ, |
| ಉದ್ಯೋಗ | ಃ | ಚಿಕ್ಕನ್ ಅಂಗಡಿಯಲ್ಲಿ ಕೆಲಸ |
| ವಾಸಃ | ಃ | ನಾರಾಯಣಪ್ಪ ಮಟನ್ ಸ್ಟಾಲ್ ಪಕ್ಕ, ಹುಣಸೆ ಮರದ ಕ್ರಾಸ್, ನೆಲಮಂಗಲ ಟೌನ್. |

## ದೋಷಾರೋಪಣೆ

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ07.01.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

2 ನೇ ಆರೋಪಿಯ ಸಹಿಃ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಕಡೂರು**

**ಸಿಸಿ . ನಂ. 1359/2017**

| | | |
|---|---|---|
| ಫಿರ್ಯಾದಿ | : | ಕಡೂರು ಪೋಲಿಸ್ |
| | ವಿರುದ್ದ | |
| 3 ನೇ ಆರೋಪಿಯ ಹೆಸರು | : | ಸಿಕಂದರ್ ಖುರೇಶಿ ಅಲಿಯಾಸ್ ಮಹಮ್ಮದ್ |
| ತಂದೆಯ ಹೆಸರು | : | ತಾಹ್ಯರ್ ಖುರೇಶಿ |
| ವಯಸ್ಸು | : | 20 ವರ್ಷ, |
| ಉದ್ಯೋಗ | : | ಕರ್ನಾಟಕ ಮಟನ್ ಸ್ಟಾಲ್ ಅಂಗಡಿಯಲ್ಲಿ ಕೆಲಸ |
| ವಾಸಃ | : | ಮಧು ಮೆಡಿಕಲ್ ಹತ್ತಿರ, 2 ನೇ ಕ್ರಾಸ್, ದರ್ಗಾ ಹತ್ತಿರ, ನೆಲಮಂಗಲ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ. |

**ದೋಷಾರೋಪಣೆ**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ07.01.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

3 ನೇ ಆರೋಪಿಯ ಸಹಿಃ